ಜಲಭವನ
ನಂ.6, ಮೊದಲನೇ ಹಂತ, ಮೊದಲನೇ ಫೇಸ್,
ಬಿಟಿಎಂ ಲೇಔಟ್, ಬನ್ನೇರುಘಟ್ಟ ರಸ್ತೆ,
ಬೆಂಗಳೂರು-5600029

# ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು

ಸಂಖ್ಯೆ:ಕಜಮ/ಹೆಚ್ಆರ್‌ಡಿ-1/ಕಿ.ಅ. - ವ್ಯನಿ/ 1991 /2017-18 ದಿನಾಂಕ. 28/11/2017

## ಅಧಿಸೂಚನೆ

ವಿಷಯ: ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಿನಾಂಕ 9-2-2017ರ ತೀರ್ಪಿನಂತೆ ಮಂಡಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಿರಿಯ ಅಭಿಯಂತರರ ಹುದ್ದೆಯಿಂದ ವ್ಯವಸ್ಥಾಪಕ ನಿರ್ದೇಶಕರವರ ಹುದ್ದೆಯವರೆಗೆ ಅಂತಿಮ ಜೇಷ್ಠತಾ ಪಟ್ಟಿಯನ್ನು ದಿನಾಂಕ 27-4-1978 ರಿಂದ ಅನ್ವಯಿಸುವಂತೆ ಪರಿಷ್ಕರಿಸಿ ಪ್ರಕಟಿಸುವ ಬಗ್ಗೆ.

ಉಲ್ಲೇಖ: 1. ಸಿವಿಲ್ ಅಫೀಲ್ ಸಂಖ್ಯೆ:2368/2011 ಬಿ.ಕೆ. ಪವಿತ್ರ ಮತ್ತು ಇತರರ ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ದಿನಾಂಕ:9-2-2017.

2. ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 182 ಎಸ್‌ಆರ್‌ಆರ್ 2011 ಬೆಂಗಳೂರು ದಿನಾಂಕ 6-5-2017.
3. ಮಂಡಳಿಯ ಅಧಿಸೂಚನಾ ಪತ್ರದ ಸಂಖ್ಯೆ: 1665/ ದಿ: 25.10.2017.
4. ನೌಕರರ ಆಕ್ಷೇಪಣೆಗಳು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಘನ ಸರ್ವೋಚ್ಚ ನ್ಯಾಯಾಲಯದ ಆದೇಶ ಮತ್ತು ಉಲ್ಲೇಖ(2)ರ ಸರ್ಕಾರದ ಆದೇಶದ ಮೇರೆಗೆ ಕಿರಿಯ ಅಭಿಯಂತರರ ಹುದ್ದೆಯಿಂದ ವ್ಯವಸ್ಥಾಪಕ ನಿರ್ದೇಶಕರವರ ಹುದ್ದೆಯ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ತಯಾರು ಮಾಡಿ ಉಲ್ಲೇಖ(3) ರ ಅಧಿಸೂಚನಾ ಪತ್ರದಲ್ಲಿ ಹೊರಡಿಸಲಾಗಿದ್ದು, ಸದರಿ ಜೇಷ್ಠತಾ ಪಟ್ಟಿಗೆ ಆಕ್ಷೇಪಣೆಗಳಿದ್ದಲ್ಲಿ 30 ದಿನಗಳ ಒಳಗೆ ಕಾರ್ಯದರ್ಶಿಯವರಿಗೆ ನೇರವಾಗಿ ಸಲ್ಲಿಸುವಂತೆ ಸೂಚಿಸಲಾಗಿತ್ತು. ಅದರಂತೆ, ಸಲ್ಲಿಸಿರುವ ಆಕ್ಷೇಪಣೆಗಳನ್ನು ಪರಿಶೀಲಿಸಿ ಅಗತ್ಯ ತಿದ್ದುಪಡಿಗಳನ್ನು ಅಳವಡಿಸಿ, ಬಾಕಿ ಉಳಿದ ಆಕ್ಷೇಪಣೆಗಳನ್ನು ಈ ಹಿಂದಿನ ಸಾಲಿನಲ್ಲಿ (2016) ಪ್ರಕಟಿಸಿದಂತೆ ಅಂತಿಮಗೊಳಿಸಿ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿದೆ.

ಪ್ರಸ್ತುತ ಪ್ರಕಟಿಸಿರುವ ಅಂತಿಮ ಜೇಷ್ಠತಾ ಪಟ್ಟಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪು ಮತ್ತು ಸರ್ಕಾರ ಹೊರಡಿಸಿದ ಆದೇಶಗಳಿಗೆ ಸೀಮಿತಗೊಳಿಸಿ ಪ್ರಕಟಿಸಲಾಗಿದೆ. ಅದರಂತೆ ಆಕ್ಷೇಪಣೆಗಳಿಗೆ ತೆಗೆದುಕೊಂಡ ಕ್ರಮಗಳನ್ನು ಪಟ್ಟಿಮಾಡಿ, ಈ ಅಧಿಸೂಚನೆಯೊಂದಿಗೆ ಲಗತ್ತಿಸಿದೆ.

ಸಹಿ/-
ವ್ಯವಸ್ಥಾಪಕ ನಿರ್ದೇಶಕರು,
ಕ.ನ.ನೀ.ಸ ಮತ್ತು ಒಚ ಮಂಡಳಿ,ಬೆಂಗಳೂರು

ಅಡಕ: 1. ಅನುಬಂಧ
2. ಜೇಷ್ಠತಾ ಪಟ್ಟಿ

ಪ್ರತಿಯನ್ನು ಮಾಹಿತಿಗಾಗಿ ಹಾಗೂ ಅವಗಾಹನೆಗಾಗಿ ಸಲ್ಲಿಸಲಾಗಿದೆ:-

1. ಮಾನ್ಯ ಅಧ್ಯಕ್ಷರು, ಕನನೀಸ ಮತ್ತು ಒಚ ಮಂಡಳಿ ಬೆಂಗಳೂರು ರವರಿಗೆ .
2. ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು ರವರಿಗೆ
3. ಸರ್ಕಾರದ ಕಾರ್ಯದರ್ಶಿಗಳು, ಸಿ.ಅ.ಸು.ಇ. ವಿಧಾನ ಸೌಧ, ಬೆಂಗಳೂರು ರವರಿಗೆ .

4. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನನೀಸ ಮತ್ತು ಒಚ ಮಂಡಳಿ ಬೆಂಗಳೂರು ಇವರಿಗೆ.
5. ಮಾನ್ಯ ನಗರಾಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ ಸದರಿ ಮಾಹಿತಿಯನ್ನು ಮಾನ್ಯ ಸಚಿವರ ಅವಗಾಹನೆಗೆ ತರಲು ಕೋರಿದೆ.
6. ಮುಖ್ಯ ಅಭಿಯಂತರು, (ಡಿ ಅಂಡ್ ಎಂ) ಕನನೀಸ ಮತ್ತು ಒಚ ಮಂಡಳಿ ಬೆಂಗಳೂರು ಇವರಿಗೆ
7. ಮುಖ್ಯ ಅಭಿಯಂತರು, ಕನನೀಸ ಮತ್ತು ಒಚ ಮಂಡಳಿ ವಲಯ ಬೆಂಗಳೂರು/ಮೈಸೂರು/ಧಾರವಾಡ/ಕಲಬುರಗಿ ಇವರಿಗೆ
8. ಕಾರ್ಯದರ್ಶಿಗಳು, ಕ.ನ.ನೀ.ಸ ಮತ್ತು ಒಚ ಮಂಡಳಿ, ಬೆಂಗಳೂರು ಇವರಿಗೆ .
9. ಮುಖ್ಯ ಲೆಕ್ಕಾಧಿಕಾರಿಗಳು, ಕ.ನ.ನೀ.ಸ ಮತ್ತು ಒಚ ಮಂಡಳಿ, ಬೆಂಗಳೂರು ಇವರಿಗೆ .
10. ಕಾರ್ಯಪಾಲಕ ಅಭಿಯಂತರು, ಕನನೀಸ ಮತ್ತು ಒಚ ಮಂಡಳಿ ವಿಭಾಗ -------------- ಇವರಿಗೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರು, ಕನನೀಸ ಮತ್ತು ಒಚ ಮಂಡಳಿ ಉಪ ವಿಭಾಗ ---------------- ಇವರಿಗೆ.
12. ಸಿಆರ್‌ಆರ್‌ಸಿ ಸೆಲ್ ಮುಖ್ಯಸ್ಥರು, ಬೆಂಗಳೂರು ಸದರಿ ಮಾಹಿತಿಯನ್ನು ಮಂಡಳಿಯ ಟೆಲಿಗ್ರಾಂನಲ್ಲಿ ಪ್ರಕಟಿಸಲು ಕೋರಿದೆ.
13. ಸಂಬಂಧಪಟ್ಟ ನೌಕರರಿಗೆ.
14. ರಕ್ಷಾ ಕಡತ.

ಕಾರ್ಯದರ್ಶಿ
ಕ.ನ.ನೀ.ಸ ಮತ್ತು ಒಚ ಮಂಡಳಿ,ಬೆಂಗಳೂರು.

**ದಿನಾಂಕ: 25.10.2017 ರಂದು ಮಾನ್ಯ ಸರ್ವೋಚ್ಚ ನ್ಯಾಯಲಯದ ತೀರ್ಪಿನನ್ವಯ ಪ್ರಕಟಿಸಿರುವ ಕಿ.ಅ ರಿಂದ ವ್ಯವಸ್ಥಾಪಕ ನಿರ್ದೇಶಕರವರೆಗೆ ಜ್ಯೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ ಸ್ವೀಕರಿಸಿದೆ ಆಕ್ಷೇಪಣೆಗಳಿಗೆ ತೆಗೆದುಕೊಂಡ ಕ್ರಮ**

| ಆಕ್ಷೇಪಣೆ ಸಂಖ್ಯೆ: | ನೌಕರರ ಹೆಸರು ಮತ್ತು ಹುದ್ದೆ | ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ | ಆಕ್ಷೇಪಣೆ | ಷರಾ |
|---|---|---|---|---|
| 1 | ರಾಮರಾವ್ ಗಣಪತಿ ರಾಠೋಡ, ಸಹಾಯಕ ಅಭಿಯಂತರರು. | ವಿಭಾಗ– ವಿಜಯಪುರ. | ಮಂಡಳಿಯ ನೇಮಕಾತಿ ಪ್ರಕಟಣೆ ಸಂಖ್ಯೆ: **2170/2008–09 ದಿ: 20.11.2008** ರಡಿ ಮಂಡಳಿಯಲ್ಲಿ ಸಹಾಯಕ ಅಭಿಯಂತರರ ನೇಮಕಾತಿಗಾಗಿ ನೇಮಕಾತಿ ಪ್ರಕಟಣೆ ಹೊರಡಿಸಲಾಗಿ; ಮಂಡಳಿಯ ಆದೇಶ ಸಂಖ್ಯೆ: 2293/2010–11 ದಿ: 14.01.2011 ರ ಆದೇಶದನ್ವಯ ದಿ:28.02.2011 ರಂದು ಸೇವೆಗೆ ಹಾಜರಾಗಿರುವುದಾಗಿ ತಿಳಿಸಿರುತ್ತಾರೆ. ಆದರೆ ಮಂಡಳಿಯ **ನೇಮಕಾತಿ ಪ್ರಕಟಣೆ ಸಂಖ್ಯೆ: 1816/2010–11 ದಿ: 12.11.2010** ರಡಿ ಮಂಡಳಿಯಲ್ಲಿ ಸ.ಅ.(ಬ್ಯಾಕ್‌ಲಾಗ್) ನೇಮಕಾತಿಗಾಗಿ ಪ್ರಕಟಣೆ ಹೊರಡಿಸಲಾಗಿ, ಮಂಡಳಿಯ ಆದೇಶ ಸಂಖ್ಯೆ: 2292/2010–11 ದಿ: 14.01.2011 ರಲ್ಲಿ ಆದೇಶ ಹೊರಡಿಸಲಾಗಿದ್ದು, ನೇಮಕಗೊಂಡ ಸದರಿ ಸಹಾಯಕ ಅಭಿಯಂತರು (ಬ್ಯಾಕ್‌ಲಾಗ್) ಇವರುಗಳನ್ನು ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ನೇಮಕಾತಿ ಪ್ರಕಟಣೆ ಸಂಖ್ಯೆ: 2170/2008–09 ದಿ: 20.11.2008 ರನ್ವಯ ನೇಮಕಗೊಂಡ ಸಹಾಯಕ | ಪ್ರಸ್ತುತ ಮಾನ್ಯ ಸರ್ವೋಚ್ಚ ನ್ಯಾಯಲಯದ ತೀರ್ಪಿನನ್ವಯ ಹಾಗೂ ಈ ಕುರಿತಂತೆ ಸರ್ಕಾರವು ಹೊರಡಿಸಿದ ಆದೇಶದನ್ವಯ ಜ್ಯೇಷ್ಠತೆಯನ್ನು ನಿಗದಿ ಪಡಿಸಿರುವುದರಿಂದ , ಈ ಹಿಂದಿನ ಪ್ರಕರಣಗಳಿಗೆ ಸಂಬಂಧಿಸಿದಂತೆ ಈಗಾಗಲೇ ಇತ್ಯರ್ಥಗೊಳಿಸಿರುವ ಪ್ರಕರಣಗಳನ್ನು ಪುನರಾವಲೋಕನ ಮಾಡಲು ಬರುವುದಿಲ್ಲ. |

| | | | | |
|---|---|---|---|---|
| | | | ಅಭಿಯಂತರರಿಗಿಂತ ಹಿರಿಯತನದ ಜೇಷ್ಠತೆಯಲ್ಲಿ ನಿಗದಿ ಪಡಿಸಲಾಗಿರುವುದರಿಂದ ತಮಗೆ ಅನ್ಯಾಯವಾಗಿರುತ್ತದೆಂದು ತಿಳಿಸಿರುತ್ತಾರೆ.<br>ಎರಡು ಆದೇಶಗಳನ್ನು ಒಂದೇ ದಿನ ಪ್ರಕಟಿಸಿದ್ದು; 2008 ರ ಪ್ರಕಟಣೆ ಅನ್ವಯ ನೇಮಕಗೊಂಡ ಸಹಾಯಕ ಅಭಿಯಂತರರ ಜೇಷ್ಠತೆಯನ್ನು ಮೊದಲು ಪರಿಗಣಿಸಿ, ನಂತರ 2010 ರ ಪ್ರಕಟಣೆಯಂತೆ ನೇಮಕಗೊಂಡ ಸಹಾಯಕ ಅಭಿಯಂತರು (ಬ್ಯಾಕ್‌ಲಾಗ್) ಇವರುಗಳನ್ನು ಪರಿಗಣಿಸಿ ಜೇಷ್ಠತಾ ಪಟ್ಟಿಯನ್ನು ಪುನ: ಪರಿಶೀಲಿಸಲು ವಿನಂತಿಸಿರುತ್ತಾರೆ. | |
| 2. | ಪ್ರವೀಣ.ವಾಯ್.ಸಾಯನೇಕರ್ ಸಹಾಯಕ ಅಭಿಯಂತರು. | ಉಪ-ವಿಭಾಗ, ಬೈಲಹೊಂಗಲ. | ಇವರು ಮಂಡಳಿಯ ನೇಮಕಾತಿ ಪ್ರಕಟಣೆ ಸಂಖ್ಯೆ: **2170/2008-09** ದಿ: **20.11.2008** ರಡಿ ಮಂಡಳಿಯಲ್ಲಿ ಸಹಾಯಕ ಅಭಿಯಂತರರ ನೇಮಕಾತಿಗಾಗಿ ನೇಮಕಾತಿ ಪ್ರಕಟಣೆ ಹೊರಡಿಸಲಾಗಿ; ಮಂಡಳಿಯ ಆದೇಶ ಸಂಖ್ಯೆ: 2293/2010-11 ದಿ: 14.01.2011 ರ ಆದೇಶದನ್ವಯ ದಿ: 3.02.2011 ರಂದು ಸೇವೆಗೆ ಹಾಜರಾಗಿರುವುದಾಗಿ ತಿಳಿಸಿರುತ್ತಾರೆ. ಆದರೆ ಮಂಡಳಿಯ **ನೇಮಕಾತಿ ಪ್ರಕಟಣೆ ಸಂಖ್ಯೆ: 1816/2010-11** ದಿ: **12.11.2010** ರಡಿ ಮಂಡಳಿಯಲ್ಲಿ ಸ.ಅ.(ಬ್ಯಾಕ್‌ಲಾಗ್) ನೇಮಕಾತಿಗಾಗಿ ಪ್ರಕಟಣೆ ಹೊರಡಿಸಲಾಗಿ, ಮಂಡಳಿಯ ಆದೇಶ ಸಂಖ್ಯೆ: 2292/2010-11 ದಿ: 14.01.2011 ರಲ್ಲಿ ಆದೇಶ ಹೊರಡಿಸಲಾಗಿದ್ದು, ನೇಮಕಗೊಂಡ ಸದರಿ ಸಹಾಯಕ ಅಭಿಯಂತರು (ಬ್ಯಾಕ್‌ಲಾಗ್) ಇವರುಗಳನ್ನು ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ನೇಮಕಾತಿ ಪ್ರಕಟಣೆ ಸಂಖ್ಯೆ: 2170/2008-09 ದಿ: | ಪ್ರಸ್ತುತ ಮಾನ್ಯ ಸರ್ವೋಚ್ಚ ನ್ಯಾಯಲಯದ ತೀರ್ಪಿನನ್ವಯ ಹಾಗೂ ಈ ಕುರಿತಂತೆ ಸರ್ಕಾರವು ಹೊರಡಿಸಿದ ಆದೇಶದನ್ವಯ ಜ್ಯೇಷ್ಠತೆಯನ್ನು ನಿಗದಿ ಪಡಿಸಿರುವುದರಿಂದ , ಈ ಹಿಂದಿನ ಪ್ರಕರಣಗಳಿಗೆ ಸಂಬಂಧಿಸಿದಂತೆ ಈಗಾಗಲೇ ಇತ್ಯರ್ಥಗೋಳಿಸಿರುವ ಪ್ರಕರಣಗಳನ್ನು ಪುನರಾವಲೋಕನ ಮಾಡಲು ಬರುವುದಿಲ್ಲ. |

| | | | | |
|---|---|---|---|---|
| | | | 20.11.2008 ರನ್ವಯ ನೇಮಕಗೊಂಡ ಸಹಾಯಕ ಅಭಿಯಂತರರಿಗಿಂತ ಹಿರಿಯತನದ ಜೇಷ್ಠತೆಯಲ್ಲಿ ನಿಗದಿ ಪಡಿಸಲಾಗಿರುವುದರಿಂದ ತಮಗೆ ಅನ್ಯಾಯವಾಗಿರುತ್ತದೆಂದು ತಿಳಿಸಿರುತ್ತಾರೆ.<br>ಎರಡು ಆದೇಶಗಳನ್ನು ಒಂದೇ ದಿನ ಪ್ರಕಟಿಸಿದ್ದು; 2008 ರ ಪ್ರಕಟಣೆ ಅನ್ವಯ ನೇಮಕಗೊಂಡ ಸಹಾಯಕ ಅಭಿಯಂತರರ ಜೇಷ್ಠತೆಯನ್ನು ಮೊದಲು ಪರಿಗಣಿಸಿ, ನಂತರ 2010 ರ ಪ್ರಕಟಣೆದಂತೆ ನೇಮಕಗೊಂಡ ಸಹಾಯಕ ಅಭಿಯಂತರು (ಬ್ಯಾಕ್‌ಲಾಗ್) ಇವರುಗಳನ್ನು ಪರಿಗಣಿಸಿ ಜೇಷ್ಠತಾ ಪಟ್ಟಿಯನ್ನು ಪುನ: ಪರಿಶೀಲಿಸಲು ವಿನಂತಿಸಿರುತ್ತಾರೆ. | |
| 3 | ಕಿರಣ. ಎಸ್.ಮಾಸ್ತಿ ಸಹಾಯಕ ಅಭಿಯಂತರು | ಉಪ-ವಿಭಾಗ, ಧಾರವಾಡ. | ಇವರು ಮಂಡಳಿಯ ನೇಮಕಾತಿ ಪ್ರಕಟಣೆ ಸಂಖ್ಯೆ: **2170/2008-09 ದಿ: 20.11.2008** ರಡಿ ಮಂಡಳಿಯಲ್ಲಿ ಸಹಾಯಕ ಅಭಿಯಂತರರ ನೇಮಕಾತಿಗಾಗಿ ನೇಮಕಾತಿ ಪ್ರಕಟಣೆ ಹೊರಡಿಸಲಾಗಿ; ಮಂಡಳಿಯ ಆದೇಶ ಸಂಖ್ಯೆ: 2293/2010-11 ದಿ: 14.01.2011 ರ ಆದೇಶದನ್ವಯ ದಿ: 25.01.2011 ರಂದು ಸೇವೆಗೆ ಹಾಜರಾಗಿರುವುದಾಗಿ ತಿಳಿಸಿರುತ್ತಾರೆ. ಆದರೆ ಮಂಡಳಿಯ **ನೇಮಕಾತಿ ಪ್ರಕಟಣೆ ಸಂಖ್ಯೆ: 1816/2010-11 ದಿ: 12.11.2010** ರಡಿ ಮಂಡಳಿಯಲ್ಲಿ ಸ.ಅ.(ಬ್ಯಾಕ್‌ಲಾಗ್) ನೇಮಕಾತಿಗಾಗಿ ಪ್ರಕಟಣೆ ಹೊರಡಿಸಲಾಗಿ, ಮಂಡಳಿಯ ಆದೇಶ ಸಂಖ್ಯೆ: 2292/2010-11 ದಿ: 14.01.2011 ರಲ್ಲಿ ಆದೇಶ ಹೊರಡಿಸಲಾಗಿದ್ದು, ನೇಮಕಗೊಂಡ ಸದರಿ ಸಹಾಯಕ ಅಭಿಯಂತರು (ಬ್ಯಾಕ್‌ಲಾಗ್) ಇವರುಗಳನ್ನು ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ | ಪ್ರಸ್ತುತ ಮಾನ್ಯ ಸರ್ವೋಚ್ಛ ನ್ಯಾಯಲಯದ ತೀರ್ಪಿನನ್ವಯ ಹಾಗೂ ಈ ಕುರಿತಂತೆ ಸರ್ಕಾರವು ಹೊರಡಿಸಿದ ಆದೇಶದನ್ವಯ ಜ್ಯೇಷ್ಠತೆಯನ್ನು ನಿಗದಿ ಪಡಿಸಿರುವುದರಿಂದ , ಈ ಹಿಂದಿನ ಪ್ರಕರಣಗಳಿಗೆ ಸಂಬಂಧಿಸಿದಂತೆ ಈಗಾಗಲೇ ಇತ್ಯರ್ಥಗೋಳಿಸಿರುವ ಪ್ರಕರಣಗಳನ್ನು ಪುನರಾವಲೋಕನ ಮಾಡಲು ಬರುವುದಿಲ್ಲ. |